ಏನಾತು ಹೇಳು. ಕುಲದೇವರಾಣಿ ನಿನಗ" ಎಂದು ದೇವರ ಮಂಟಪದ ಮುಂದೆ ನಿಲ್ಲಿಸಿದಳು. "ಅದ... ಇಕಿ ಸಿನಿಮಾಕ್ಕ ಹೋಗೋಣು. ಆಮ್ಯಾಲೆ ಚೌಕಶಿ ಮಾಡಿದ್ರಾತು... ಅಂದ್ಲು. ಸಿನಿಮಾ ನೋಡಕೊಂಡು ಮಿಸಳ ತಿಂದು ಬರೋದ್ರಾಗ ಫ್ಯಾಕ್ಟರಿ ಮುಚ್ಚಿತ್ತು. ಗೂರ್ಖಾ ಹೊರಗ ಕೂತಿದ್ದಾ. 'ಇಂಥಾವ ನೌಕರಿ ಮಾಡ್ತಾನೇನು?' ಅಂತ ಕೇಳಿದೆ. 'ಹ್ಞೂಂ... ಇರಬಹುದು' ಅಂದಾ. ಹೊತ್ತಾತಂತ ಊರಿಗೆ ಬಂದಬಿಟ್ವಿ" ಎಂದ. ಅಪ್ಪನಿಂದ ಕಪಾಳಮೋಕ್ಷವಾಯಿತು. ದೊಡ್ಡಣ್ಣ, "ನಿನ್ನಿಂದ ರುಕ್ಕೂನ ಜೀವನ ಹಾಳಾತು" ಎಂದು ಕೂಗಾಡಿದ. ಕೇಶಣ್ಣ ಅಳುತ್ತಿದ್ದರೆ ರಾಧಾವ್ವೈನಿ ಕಣ್ಣೊರೆಸಿಕೊಳ್ಳುತ್ತ, "ಅಕಿ ನಶೀಬ ಖೊಟ್ಟಿ ಇದ್ದರ ಯಾರೇನ ಮಾಡ್ಲಿಕ್ಕಾಗ್ತದ? ಸುಮ್ಮನ ನಮ್ಮನ್ಯಾಕ ಅಂತೀರಿ?" ಎಂದು ಕಣ್ಣೊರೆಸಿಕೊಳ್ಳಲಾರಂಭಿಸಿದರು. ಅಲ್ಲಿಗೆ ಪ್ರಹಸನ ಮುಕ್ತಾಯವಾಯಿತು. ರಮಾ ವೈನಿ ನನ್ನನ್ನಪ್ಪಿ, "ರಾಯರು ಕೈಬಿಡೂದುಲ್ಲ. ಗುರುವಾರ ಒಪ್ಪೊತ್ತು ಮಾಡು" ಎಂದು ಸಂತೈಸಿದರು. ವ್ರತ, ಉಪವಾಸ, ನೇಮಗಳು ಆರಂಭವಾದವು. ನಾನೆಷ್ಟೇ ಶ್ರದ್ಧೆಯಿಂದ ಮಾಡಿದರೂ ಮತ್ತೆ ಗಂಡನೊಂದಿಗೆ ಬಾಳುವ ಮನಸ್ಸು ಎಳ್ಳಷ್ಟೂ ಇರಲಿಲ್ಲ. ದೊಡ್ಡಣ್ಣ ಕೊಲ್ಹಾಪುರಕ್ಕೆ ಹೋಗಿ ಹುಡುಕಾಡಿ ಬರಿಗೈಯಲ್ಲಿ ಮರಳಿದ. ಮತ್ತೊಂದು ತಿರುವಿಗೆ ಹೊರಳಿ ಬಾಳು ಚಲಿಸಲಾರಂಭಿಸಿತು. ಮಂಚಿಗೂ ಮದುವೆಯಾಯಿತು. ಹುಡುಗ ಚೆನ್ನಾಗಿದ್ದ. ಮುಂಬೈನಲ್ಲಿ ಕೆಲಸ. ಬಸವ್ವ ಉಸ್ಸೆಂದು ಉಸಿರು ಬಿಟ್ಟಳು. ಎರಡು ತಿಂಗಳು ಮಂಚಿಯನ್ನೂ ಕರೆದುಕೊಂಡು ಓಡಾಡಿದ. ಮುಂಬೈನಲ್ಲಿ ಮನೆ ಮಾಡಿ ಕರೆದೊಯ್ಯುವುದಾಗಿ ಹೇಳಿ ಹೋದವನ ಸುದ್ದಿಯೇ ಇಲ್ಲ. ಮಂಚಿ ಗರ್ಭಿಣಿ. ಕಾದದ್ದೇ ಬಂತು. ಇಬ್ಬರಿಗೂ ಕಾಯುವಿಕೆ ತಪವಾಗಿತ್ತು. ನಾಲ್ಕು ತಿಂಗಳ ಅನಂತರ ಬಂದ ಸುದ್ದಿ ಆಘಾತಕರವಾಗಿತ್ತು. ಅಪಘಾತದಲ್ಲಿ ಮಂಚಿಯ ಗಂಡ ಮಡಿದಿದ್ದ. ಅದು ಗೊತ್ತಾಗಲೂ ಎಷ್ಟೋ ಕಾಲ ಹಿಡಿಯಿತು. ಮಂಚಿ ಹೌಹಾರಿದಳು. ಅತ್ತು ಅತ್ತು ಬಸವಳಿದಳು. ಎರಡೇ ತಿಂಗಳ ಸುಂದರ ಸಂಸಾರದಲ್ಲಿ ನಕ್ಷತ್ರಗಳನ್ನೇ ತೋರಿಸಿದವ ಸ್ವತಃ ನಕ್ಷತ್ರವಾಗಿದ್ದ. ಬಸವ್ವ ಬಸವಳಿದಿದ್ದಳು. ನಾನು ಮಂಚಿಗೆ ಒತ್ತಾಸೆಯಾಗಿ ನಿಂತು ಅವಳನ್ನು ಸಂತೈಸಿದ್ದೆ. ಬಲವಂತವಾಗಿ ಊಟ ಮಾಡಿಸಿದ್ದೆ. ಮಂಚಿ ಗರ್ಭಿಣಿಯೆಂದೂ ನೋಡದೇ ಅವಳ ಅತ್ತೆ ಸೊಸೆಯ ಕಾಲ್ಗುಣವನ್ನು ಹಳಿದು ಅವಳಿಂದಾಗೇ ಮಗ ತೀರಿಹೋದನೆಂದು ಜರಿದರು. ಮನೆಯ ಹೊಸ್ತಿಲು ಮೆಟ್ಟಬೇಡವೆಂದು ಹೇಳಿದಾಗ ಕಣ್ಣೀರ ಕಾಲುವೆ ಹರಿದಿತ್ತು. ಆದರೆ, ಮಂಚಿ ಗಟ್ಟಿಯಾಗಿ ನಿಂತಳು. ಮಗುವಿಗಾಗಿ ಬಾಳ್ವೆ ಮಾಡುವ ನಿರ್ಧಾರ ಮಾಡಿದಳು. ಹಿರಿಯರೆಲ್ಲ ಇದ್ದಾಗ ರಾಧಾವ್ವೈನಿ, "ರುಕ್ಕು, ನೀ ಚಿಂತಿ ಮಾಡಬ್ಯಾಡಾ. ಇದು ನಿಂದ ಮನಿ. ಅಂವಾ ಬರ್ಲಿ... ಬಿಡ್ಲಿ. ನಾವೆಲ್ಲಾ ಇದ್ದೇವಿ. ನೀ ಆರಾಮಾಗಿರು" ಎನ್ನುತ್ತಿದ್ದರು. ಯಾರಿಲ್ಲದಾಗ, "ಎರಡೂ ಹೆಣ್ಣುಗೊಳೂ ಮನಿಗೆ ಮೂಲಾಗಿ ಬಂದು ಕುಕ್ಕರಸ್ಯಾವ" ಎಂದಾಡಿ ತಮ್ಮ ನಾಲಿಗೆಯ ತೀಟೆ ತೀರಿಸಿಕೊಳ್ಳುವುದಿತ್ತು.

ಶಂಕರನ ಕಥೆ ಬೇರೆಯೇ ಆಗಿತ್ತು. ಬೆಳಗಾವಿಯಲ್ಲಿ ಡಿಪ್ಲೊಮಾ ಮುಗಿಸಿಕೊಂಡು ಅಲ್ಲೇ ಒಂದು ಚಿಕ್ಕ ಫ್ಯಾಕ್ಟರಿ ಆರಂಭಿಸಿದ್ದ. ಅದು ಪರವಾಗಿಲ್ಲ ಎಂಬಂತೆ ಓಡುತ್ತಿತ್ತು. ಹೊಟ್ಟೆಗೂ ಬಟ್ಟೆಗೂ ಕಡಿಮೆ ಇರಲಿಲ್ಲ. ವಾರಕ್ಕೆರಡು ಬಾರಿ ಬಂದು ಹೊಲಗಳನ್ನೂ ಅಜ್ಜಿಯನ್ನೂ ನೋಡಿಕೊಂಡು ಹೋಗುತ್ತಿದ್ದ. ಅಜ್ಜಿಯನ್ನು ಬೆಳಗಾವಿಗೆ ಕರೆದೊಯ್ಯಲು ಶತಪ್ರಯತ್ನ ಮಾಡಿದನಂತೆ. "ನನ್ನ ಗಂಡ ಮಗಾ ಬಾಳಿ ಬದುಕಿದ ಮನಿ ಬಿಟ್ಟು ಬರಾಂಗಿಲ್ಲ. ಇದ್ದರ ಇಲ್ಲೇ ಇರಾಕಿ... ಸತ್ತರೂ ಇಲ್ಲೇ ಸಾಯಾಕಿ" ಎಂದು ಹಟ ಹಿಡಿದಳಂತೆ. ಸುಮ್ಮನಾಗಿ ತಾನೇ ಬಂದು ಹೋಗುತ್ತಿದ್ದ. ಅವಳನ್ನು ನೋಡಿಕೊಳ್ಳಲು ಮಂಚಿಗೆ ಹೇಳಿದ್ದ. ಅಜ್ಜಿ ತಾನೇ ಹುಡುಗಿಯನ್ನು ಆರಿಸಿ ಮೊಮ್ಮಗ ಶಂಕರನಿಗೆ ಮದುವೆ ಮಾಡಿಸಿ ಊರಿಗೆಲ್ಲ ಊಟ ಹಾಕಿಸಿದ್ದಳು. ನವದಂಪತಿಯನ್ನು ಬೆಳಗಾವಿಗೆ ಕಳಿಸಿದ್ದಳು. ಅವರು ಅಲ್ಲಿ ಎರಡು ವರ್ಷಗಳವರೆಗೆ ಆನಂದವಾಗಿದ್ದುದೂ ಇತ್ತು. ಸಂಸಾರ ಚಿಗುರಿ ಹೂಬಿಡುವ